## ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹಾವೇರಿ.

## ಸಿ.ಸಿ.ನಂ.480/2018

| | | | |
|---|---|---|---|
| ಸಾಕ್ಷಿದಾರರ ಹೆಸರು | ಮಹಮ್ಮದ ನಸರುಲ್ಲಾ | ಪಿಡಬ್ಲ್ಯೂ | 1 |
| ತಂದೆಯ ಹೆಸರು | ಅಬ್ದುಲ್‌ಗನಿ | ಪಿಡಬ್ಲ್ಯೂ | 3 |
| ವಯಸ್ಸು | 65 ವರ್ಷ | | |
| ಉದ್ಯೋಗ | ನಿವೃತ್ತ ಸರ್ಕಾರಿ ನೌಕರರು | | |
| ವಾಸಸ್ಥಳ | ಹುಬ್ಬಳ್ಳಿ | | |

**ದಿಃ06.03.2026 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಸಾಕ್ಷಿದಾರರ ಮುಖ್ಯ ವಿಚಾರಣೆಃ ಭಾ.ದಂ.ಸಂ ಕಲಂ.299 ರಡಿಯಲ್ಲಿ**

1) ನಾನು ಹಾವೇರಿಯ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯಲ್ಲಿ ಹಿರಿಯ ಭೂ ವಿಜ್ಞಾನಿಯಾಗಿ 2009 ರಿಂದ ಫೆಬ್ರವರಿ 2014 ರವರೆಗೆ ಸೇವೆ ಸಲ್ಲಿಸಿದ್ದೇನೆ. ಈ ಪ್ರಕರಣಕ್ಕೆ ಸಂಬಂದಪಟ್ಟಂತೆ ಚಾ.ಸಾ-7 ರಿಂದ 10 ರವರ ಪರಿಚಯ ಇರುತ್ತದೆ. 1 ನೇ ಆರೋಪಿಯು ನಮ್ಮ ಇಲಾಖೆಯ ವ್ಯಾಪ್ತಿಯಲ್ಲಿ ಒಳಪಟ್ಟ ದಿನಾಂಕಃ 02.02.2010 ರಂದು ತುಂಗಭದ್ರಾ ನದಿಯ ದಡದಲ್ಲಿ ರಾಣೇಬೆನ್ನೂರಿನ ವ್ಯಾಪ್ತಿಯಲ್ಲಿ ಬರುವಂತಹ ಚಿಕ್ಕಕುರವತ್ತಿ ಗ್ರಾಮದಲ್ಲಿ ಹರಿಯುತ್ತಿದ್ದ ತುಂಗಭದ್ರಾ ನದಿಯ ದಡದಲ್ಲಿ ಬ್ಲಾಕ ನಂಬರಃ 1 ಮತ್ತು 2 ಎಂದು ಗುರುತಿಸಿ ಸಾರ್ವಜನಿಕ ಹರಾಜಿನಲ್ಲಿ ಮರಳನ್ನು ಸಂಗ್ರಹಿಸಿ ಸಾಗಾಣಿಕೆ ಮಾಡಲು ಮತ್ತು ಹರಾಜು ಪ್ರಕ್ರಿಯೆ ಮಾಡಲು ಪತ್ರಿಕೆಯಲ್ಲಿ ಪ್ರಕಟಣೆಯನ್ನು ಹೊರಡಿಸಲಾಗಿರುತ್ತದೆ. ಸದರಿ ಹರಾಜಿನಲ್ಲಿ ನಮ್ಮ ಇಲಾಖೆಯ ಒಟ್ಟು 4 ಜನ ಇದ್ದು, ಚಾ.ಸಾ-7 ಇವರ ಅಧ್ಯಕ್ಷತೆಯಲ್ಲಿ ಹಾಗೂ ಹಾವೇರಿಯ ತಹಶೀಲ್ದಾರ ಮತ್ತು ಕಾರ್ಯನಿರ್ವಾಹಕ

ಅಧಿಕಾರಿ ಇವರ ಸಮಕ್ಷಮ ಹರಾಜು ಪ್ರಕ್ರಿಯೆ ದಿನಾಂಕಃ 18.02.2010 ರಂದು ನಡೆದಿರುತ್ತದೆ.

2) ದಿನಾಂಕಃ 16.02.2010 ರಂದು ನಾನು ಕಛೇರಿಯಲ್ಲಿ ನಿರ್ವಹಿಸುತ್ತಿದ್ದಾಗ 1 ನೇ ಆರೋಪಿ ನನ್ನ ಕಛೇರಿಗೆ ಬಂದು ನಾನು ಚಿಕ್ಕಕುರವತ್ತಿಯ ಬ್ಲಾಕ ನಂಬರಃ 1 ಹರಾಜು ಪ್ರಕ್ರಿಯೆಯಲ್ಲಿ ಭಾಗವಹಿಸುತ್ತೇನೆ ಎಂದು ಐ.ಸಿ.ಐ.ಸಿ.ಐ ಬ್ಯಾಂಕ ದಾವಣಗೆರೆ ಶಾಖೆಯಿಂದ ರೂ.1,13,400/- ಗಳ ಡಿ.ಡಿಯನ್ನು ತಂದು ನನ್ನ ಸಮಕ್ಷಮ ಹಾಜರುಪಡಿಸಿದ್ದರು. ನಂತರ ಸದರಿ 1 ನೇ ಆರೋಪಿಗೆ ನೀನು ಹರಾಜಿನಲ್ಲಿ ಭಾಗವಹಿಸಿ ಎಂದು ಪ್ರಮಾಣ ಪತ್ರಕೊಟ್ಟಿದ್ದೇವೆ. ದಿನಾಂಕಃ 18.02.2010 ರಂದು ಚಿಕ್ಕಕುರವತ್ತಿ ಬ್ಲಾಕ ನಂಬರಃ 1 ಕ್ಕೆ 3 ಜನ ವ್ಯಕ್ತಿಗಳು ಹರಾಜಿನಲ್ಲಿ ಭಾಗವಹಿಸಿದ್ದಾರೆ. ಸದರಿ ಪ್ರಕ್ರಿಯೆಯನ್ನು ನಮ್ಮ ಕಛೇರಿಯ ಚಾ.ಸಾ-6 ಇವರು ಹರಾಜನ್ನು ಮಾಡಿದ್ದಾರೆ. ಅದರಲ್ಲಿ 1 ನೇ ಆರೋಪಿಯು ಹರಾಜಿನಲ್ಲಿ ಒಟ್ಟು ರೂ.21,78,000/- ಗಳವರೆಗೆ ಹರಾಜಿನಲ್ಲಿ ಬೇಡಿಕೆಯನ್ನು ಇಟ್ಟಿರುತ್ತಾರೆ. ಸದರಿ 1 ನೇ ಆರೋಪಿಯು ಹರಾಜಿನಲ್ಲಿ ಮರಳನ್ನು ಮಾರಾಟಕ್ಕೆ ತೆಗೆದುಕೊಂಡಿರುತ್ತಾರೆ. ನಂತರ 1 ನೇ ಆರೋಪಿಗೆ ರೂ.21,78,000/- ಗಳನ್ನು ನಮ್ಮ ಕಛೇರಿಗೆ ಬಂದು ತುಂಬಬೇಕು ಎಂದು ನಿರ್ದೇಶನ ಕೊಟ್ಟಿರುತೆ?ೀವೆ. 1 ನೇ ಆರೋಪಿಗೆ ನಮ್ಮ ಕಛೇರಿಯಿಂದ ಪದೇ ಪದೇ ನೋಟಿಸ ಕೊಟ್ಟರೂ ಸಹ 1 ನೇ ಆರೋಪಿ ನಮ್ಮ ಕಚೇರಿಗೆ ಬಂದು ಹಣ ಕಟ್ಟಿರುವದಿಲ್ಲ. ಆ ಕಾರಣದಿಂದ 1 ನೇ ಅರೋಪಿ ಹರಾಜು ಆದಂತಹ ಪ್ರಮಾಣ ಪತ್ರವನ್ನು ರದ್ದುಪಡಿಸಲಾಗಿರುತ್ತದೆ.

3) ನಂತರ 1 ನೇ ಆರೋಪಿಯ ಬಿಡ ಹಣವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗಿರುತ್ತದೆ. ಆ ಬಳಿಕ 1 ನೇ ಆರೋಪಿಯು ಕೊಟ್ಟಂತಹ ಡಿ.ಡಿ.ಯ ದಿನಾಂಕ ಮುಗಿದಿದ್ದರಿಂದ ಅದನ್ನು ನವೀಕರಿಸಲು ದಿನಾಂಕಃ 16.12.2010 ನೇ ಇಸ್ವಿಯಂದು ಐ.ಸಿ.ಐ.ಸಿ.ಐ ಬ್ಯಾಂಕ ದಾವಣಗೆರೆ ಶಾಖೆಗೆ ಕೊಟ್ಟಿರುತ್ತೇವೆ . ನಂತರ 1 ನೇ ಅರೋಪಿಯು ಆತನು ನಮ ಕಛೇರಿಗೆ ಕೊಟ್ಟಂತಹ

ಡಿ.ಡಿ.ಯು ಕಳೆದುಹೋಗಿರುತ್ತದೆ ಎಂದು ಬ್ಯಾಂಕಿಗೆ ತಿಳಿಸಿ ಮತ್ತು ಸದರಿ ಡಿ.ಡಿ.ಯಲ್ಲಿ ಕಾಣಿಸಿದ ಹಣವನ್ನು ಮರುಪಾವತಿ ಮಾಡಿಕೊಂಡು 1 ನೇ ಆರೋಪಿಯು ಹೋಗಿರುತ್ತಾನೆ ಎಂದು ತಿಳಿದುಕೊಂಡು ನಂತರ ನಮ್ಮ ಕಛೇರಿಯಿಂದ 1 ನೇ ಆರೋಪಿಗೆ ನೋಟಿಸನ್ನು ಕೊಟ್ಟು ಆ ರೀತಿಯ ನೋಟಿಸನ್ನು ಕೊಟ್ಟ ನಂತರ 1 ನೇ ಆರೋಪಿಯು ನಮ್ಮ ಕಛೇರಿಗೆ ಹಣವನ್ನು ತುಂಬಿರುವದಿಲ್ಲ, ಆ ಬಳಿಕ ನಮ್ಮ ಕಛೇರಿಯ ಮೇಲಾಧಿಕಾರಿಗಳ ಮೂಲಕ ಸಂಬಂದಪಟ್ಟ ಪೊಲೀಸ ಠಾಣೆಗೆ ಹೋಗಿ ಪಿರ್ಯಾದಿಯನ್ನು 1 ನೇ ಆರೋಪಿಯ ವಿರುದ್ಧ ಸಲ್ಲಿಸಲಾಗಿದೆ.

4) ಸದರಿ ಪಿರ್ಯಾದಿಯನ್ನು ನೋಡುತ್ತಿದ್ದು, ಅದನ್ನು ಈಗಾಗಲೇ ಮೂಲ ಪ್ರಕರಣದಲ್ಲಿ ನಿ.ಪಿ-3 ಎಂದು ಗುರುತಿಸಲಾಗಿರುತ್ತದೆ ಮತ್ತು ಸಾಕ್ಷಿಯ ಸಹಿಯನ್ನು ನಿ.ಪಿ-3(ಬಿ) ಎಂದು ಗುರುತಿಸಲಾಯಿತು. ದಿನಾಂಕಃ 04.10.2011 ರಂದು ನಾನು ಕಛೇರಿಯಲ್ಲಿ ಇದ್ದಾಗ ಸುಮಾರು ಮಧ್ಯಾಹ್ನ 12-00 ಘಂಟೆಗೆ 1 ನೇ ಆರೋಪಿಯು ಹಾಗೂ ಆತನ ಜೊತೆ ಬಂದಂತಹ ಮಧ್ಯವರ್ತಿ ಆತನ ಮುಖಾಂತರ ಒಂದು ಅರ್ಜಿಯನ್ನು ಕಳುಹಿಸಿ ನಮ್ಮ ಕಛೇರಿಗೆ ಜಮಾ ಮಾಡಬೇಕಾದ ಹಣ ಯಾರೋ ನನ್ನ ಹೆಸರಿನ ಮೇಲೆ ಡಿ.ಡಿ.ಯನ್ನು ಪಡೆದುಕೊಂಡಿದ್ದು ಮತ್ತು ಆ ರೀತಿ ಹಣವನ್ನು ಲಪಟಾಯಿಸಿರುತ್ತಾರೆ ಎಂದು, ನಾನು 1 ನೇ ಆರೋಪಿಯು ಬಡವನಾಗಿದ್ದು, ಆತನ ವಿರುದ್ಧ ಪ್ರಕರಣ ದಾಖಲಿಸಬಾರದು ಎಂದು ಹಾಗೂ ನಮ್ಮ ಇಲಾಖೆಗೆ ಕಟ್ಟಬೇಕಾದಂತಹ ಹಣವನ್ನು ಹಾವೇರಿಯ ಅರ್ಬನ್ ಕೋ ಆಪರೇಟಿವ್ ಬ್ಯಾಂಕಿನ ಮುಖಾಂತರ ತೆಗೆಯಿಸಿದ ಮೂರು ಡಿ.ಡಿ.ಗಳನ್ನು ಒಟ್ಟು ರೂ.1,13,400/- ಹಣವನ್ನು ಜಮೆ ಮಾಡಿಕೊಂಡು 1 ನೇ ಆರೋಪಿಯನ್ನು ಪ್ರಕರಣದಿಂದ ಮುಕ್ತ ಮಾಡಬೇಕು ಎಂದು ಪ್ರಾರ್ಥಿಸಿಕೊಂಡಿರುತ್ತಾರೆ.

5) ನಂತರ ಮೂರು ಡಿ.ಡಿಗಳನ್ನು ತೆಗೆದುಕೊಂಡು ಹೋಗಿ 1 ನೇ ಆರೋಪಿ ವಿರುದ್ಧ ಸಲ್ಲಿಸಲಾದ ಪಿರ್ಯಾದಿಯನ್ನು ಮರಳಿ ಪಡೆಯಲು ಅನುಮತಿ ಕೇಳಿರುತ್ತೆನ್ತೀವೆ. ಆಗ ನಂತರ ಪೊಲೀಸ ಠಾಣೆಯ ಅಧಿಕಾರಿಗಳು ಈಗಾಗಲೇ

ಕೋರ್ಟಿನಲ್ಲಿ ಪ್ರಕರಣ ದಾಖಲಾಗಿರುತ್ತದೆ, ನಾವು ಕೋರ್ಟಿನ ಮುಖಾಂತರ ಪ್ರಕರಣ ಹಿಂದಕ್ಕೆ ತೆಗೆದುಕೊಳ್ಳಬೇಕು ಎಂದು ತಿಳಿಸಿರುತ್ತಾರೆ. ನಾನು ಹಾವೇರಿ ಇಲಾಖೆಯಿಂದ ವರ್ಗಾವಣೆಯಾಗಿದ್ದರಿಂದ ಬೇರೆಯವರು ಬಂದು ಕೋರ್ಟಿನ ಆದೇಶವನ್ನು ಪಡೆದುಕೊಂಡು ಹಣವನ್ನು ನಮ್ಮ ಇಲಾಖೆಗೆ ಜಮೆ ಮಾಡಿಕೊಂಡಿರುತ್ತಾರೆ.

6) ನನ್ನ ತನಿಖೆಯಲ್ಲಿ ಪೊಲೀಸ ಠಾಣೆಗೆ ಹಾಜರುಪಡಿಸಿದ, ದಾಖಲಾತಿಗಳನ್ನು ನೋಡಿದರೆ ಗುರುತಿಸಬಲ್ಲೆ. ಅವುಗಳನ್ನು ಈಗಾಗಲೇ ಮೂಲ ಪ್ರಕರಣದಲ್ಲಿ ನಿ.ಪಿ-6 ರಿಂದ 31 ಎಂದು ಗುರುತಿಸಲಾಗಿರುತ್ತದೆ. ಸದರಿ ಡಿ.ಡಿ.ಗಳನ್ನು ತೆಗೆಯಿಸಿದ ಬ್ಯಾಂಕಿನ ಅಶೋಕ ಎನ್ನುವ ಹೆಸರಿನ ಮ್ಯಾನೇಜರ ಬಂದು ನಮ್ಮ ಇಲಾಖೆಗೆ ಹೇಳಿಕೆ ಕೊಟ್ಟಿರುತ್ತಾರೆ. ಆ ಹೇಳಿಕೆ ಪ್ರಕಾರ 2 ನೇ ಆರೋಪಿಯು ಸದರಿ ಖಾತೆಯ ಖಾತೆದಾರನಾಗಿರುವದು ಗೊತ್ತಾಗಿರುತ್ತದೆ. ಆದ್ದರಿಂದ 1 ಮತ್ತು 2 ನೇ ಆರೋಪಿಗಳು ಇಬ್ಬರೂ ಸೇರಿಕೊಂಡು ನಮ್ಮ ಇಲಾಖೆಗೆ ಮೋಸ ಮಾಡಿಕೊಂಡಿರುತ್ತಾರೆ. ಆದ್ದರಿಂದ ಅವರ ವಿರುದ್ಧ ಸೂಕ್ತ ಕಾನೂನು ಕ್ರಮ ತೆಗೆದುಕೊಳ್ಳಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

**ಮರು ವಿಚಾರಣೆ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೇ. ಸರಿ ಇದೆ.
ಎಂದು ಒಪ್ಪಿರುತ್ತಾರೆ.

ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು
ಹಾವೇರಿ.